<u>**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**</u>

**ಸಿ.ಸಿ. ಸಂಖ್ಯೆಃ 35/2024**

**ಸಾಕ್ಷಿಯನ್ನು ದಿಃ 17.03.2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಶ್ರೀನಿವಾಸ ಮೂರ್ತಿ ಎಸ್ ಬಿ | ಸಿಡಬ್ಲ್ಯೂಃ 4 | ಪಿಡಬ್ಲ್ಯೂಃ 7 |
| ತಂದೆಯ ಹೆಸರು | ಬಸವರಾಜು ಎಸ್ | | |
| ವಯಸ್ಸು | 43 ವರ್ಷ | | |
| ಕೆಲಸ | ಅಬಕಾರಿ ಉಪ ನಿರೀಕ್ಷಕರು,<br>ಜಯ ನಗರ ವಲಯ ,<br>ಬೆಂಗಳೂರು . | | |
| ವಾಸಸ್ಥಳ | ಬೆಂಗಳೂರು. | | |

<u>**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**</u>

ನಾನು ದಿಃ 05.01.2023 ರಿಂದ 05.02.2024ವರೆಗೆ ಹುಣಸೂರು ವಲಯ ಕಛೇರಿಯಲ್ಲಿ ಅಬಕಾರಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 01.05.2023 ರಂದು ಚಾಸಾ-5 ರವರು ಹಾಗೂ ಸಹ ಸಿಬ್ಬಂದಿಗಳಾದ ಚಾಸಾ-3 ರವರೊಂದಿಗೆ ಇಲಾಖಾ ವಾಹನ ಸಂಖ್ಯೆ ಕೆ ಎ 45 ಜಿ 106 ರಲ್ಲಿ ಹುಣಸೂರು ಪಟ್ಟಣದಿಂದ ಕೆ ಆರ್ ನಗರ ಪಟ್ಟಣಕ್ಕೆ ಹೋಗುವ ರಸ್ತೆಯ ಮಧ್ಯ ಇರುವ ಹುಣಸೂರು ಪಟ್ಟಣ ಪೊಲೀಸ್ ಠಾಣೆಯ ಸರಹದ್ದು ಮುಕ್ತಾಯ ಎಂಬ ನಾಮ ಫಲಕ ಇದ್ದ ಬೋರ್ಡ್ ಮುಂಭಾಗ ರಾತ್ರಿ 9.30 ಕ್ಕೆ ರಸ್ತೆ ಗಸ್ತು ನಡೆಸುತ್ತಿದ್ದಾಗ ಹುಣಸೂರು ಕಡೆಯಿಂದ ಒಂದು ದ್ವಿ ಚಕ್ರ ವಾಹನ ಬರುವುದು ಕಂಡು ಬಂತು. ಸದರಿ ವಾಹನವನ್ನು ತಡೆದು ನಿಲ್ಲಿಸಿ ನೋಡಲಾಗಿ ಸದರಿ ವಾಹನದ ಪೆಟ್ರೋಲ್ ಟ್ಯಾಂಕ್ ಮೇಲೆ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಕಂಡು ಬಂತು. ಅದನ್ನು ತಪಾಸಣೆ ಮಾಡಲು ಮತ್ತೊಂದು ದ್ವಿ ಚಕ್ರ ವಾಹನ ಬರುತ್ತಿದ್ದು ಅದರಲ್ಲಿ ಇಬ್ಬರೂ ಆಸಾಮಿಗಳು ಇದ್ದು ಅದನ್ನು ತಡೆದು ನಿಲ್ಲಿಸಿ ಅವರಿಗೆ ನಮ್ಮ ಪರಿಚಯವನ್ನು

ಮಾಡಿಕೊಂಡು ಪಂಚರಾಗಿ ಸಹಕರಿಸಲು ಕೋರಲಾಗಿ ಅವರು ಒಪ್ಪಿ ಮುಂದೆ ಬಂದರು. ಅವರ ಹೆಸರು ವಿಳಾಸ ಕೇಳಲಾಗಿ ಸುರೇಶ ಬಿನ್ ಕರೀಗೌಡ ಮತ್ತು ಮಹದೇವೇಗೌಡ ಬಿನ್ ರಾಜೇಗೌ ಡ ಎಂದು ಹೇಳಿದರು. ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆಯಲು ಸಮಯಾವಕಾಶ ಇಲ್ಲದೇ ಇದ್ದ ಕಾರಣ ಕಲಂ 54 ರ ಅಡಿಯಲ್ಲಿ ಸ್ಥಳದಲ್ಲಿ ಶೋಧನಾ ಸಮುಚಿತ ಆಧಾರವನ್ನು ತಯಾರಿಸಿಕೊಂಡು ಅದಕ್ಕೆ ಸಾಕ್ಷಿದಾರರ ಸಹಿಯನ್ನು ಪಡೆಯಲಾಯಿತು. ನಂತರ ಪರಸ್ಪರ ಅಂಗ ಶೋಧನೆ ಮಾಡಿಕೊಂಡೆವು. ಸದರಿ ವಾಹನವನ್ನು ಪರಿಶೀಲಿಸಲಾಗಿ ವಾಹನದ ಪೆಟ್ರೋಲ್ ಟ್ಯಾಂಕ್ ಮೇಲೆ ಇದ್ದ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಮದ್ಯದ ಟೆಟ್ರಾ ಪ್ಯಾಕ್ ಗಳು ಕಂಡು ಬಂದವು. ಅವುಗಳಲ್ಲಿ ಅಬಕಾರಿ ಭದ್ರತಾ ಚೀಟಿ ಇರಲಿಲ್ಲ. ಸದರಿ ಮದ್ಯದ ಟೆಟ್ರಾ ಪ್ಯಾಕ್ ಗಳನ್ನು ಹೊಂದಲು ಮತ್ತು ಸಾಗಾಣಿಕೆ ಮಾಡಲು ಪರವಾನಗೆ ವಗೈರೆ ಇದೆಯೇ ಎಂದು ಕೇಳಲಾಗಿ ಇಲ್ಲ ಎಂದು ತಿಳಿಸಿದ. ಸದರಿ ಪ್ಲಾಸ್ಟಿಕ್ ಚೀಲದಲ್ಲಿದ್ದ ಟೆಟ್ರಾ ಪ್ಯಾಕ್ ಗಳನ್ನು ನೆಲಕ್ಕೆ ಸುರಿದು ಎಣಿಕೆ ಮಾಡಲಾಗಿ ತಲಾ 90 ಎಂ ಎಲ್ ಒಟ್ಟು 50 ಒರಿಜಿನಲ್ ಛಾಯ್ಸ್ ಡಿಲಕ್ಸ್ ವಿಸ್ಕಿ ತುಂಬಿದ ಟೆಟ್ರಾ ಪ್ಯಾಕ್ ಇದ್ದವು. ಅಕ್ರಮವಾಗಿ ಮದ್ಯವನ್ನು ಹೊಂದುವುದು ಕಾನೂನಿನ ಉಲ್ಲಂಘನೆ ಎಂದು ತಿಳಿಸಿ ಆತನ ಹೆಸರು ವಿಳಾಸ ಕೇಳಲಾಗಿ ಸತೀಶ್ ಬಿನ್ ಸ್ವಾಮಿಗೌಡ ಮೈಲಾಂಬೂರು ಗ್ರಾಮದ ವಾಸಿ ಎಂದು ತಿಳಿಸಿದ. ಸದರಿ ವಾಹನವನ್ನು ಪರಿಶೀಲಿಸಲಾಗಿ ಕಪ್ಪು ಮತ್ತು ನೀಲಿ ಬಣ್ಣದ ಹೀರೋ ಹೋಂಡಾ ಸ್ಲೆಂಡರ್ ಪ್ಲಸ್ ಬೈಕ್ ಸಂಖ್ಯೆ ಕೆ ಎ 45 ಹೆಚ್ 8410 ಆಗಿತ್ತು. ನಂತರ ಸದರಿ ಆಸಾಮಿ ಮತ್ತು ವಾಹನವನ್ನು ಹಾಗೂ ಮುದ್ದೆಮಾಲನ್ನು ಇಲಾಖಾ ವಶಕ್ಕೆ ಪಡೆದುಕೊಂಡೆವು. ದೊರೆತ ಮದ್ಯದ ಟೆಟ್ರಾ ಪ್ಯಾಕ್ ಗಳ ಪೈಕಿ ತಲಾ 90 ಎಂ ಎಲ್ ನ ಒಟ್ಟು 30 ಟೆಟ್ರಾ ಪ್ಯಾಕ್ ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿಗಾಗಿ ಸಂಗ್ರಹಿಸಿ ಬಿಳಿ ಬಣ್ಣದ ಬಟ್ಟೆಯ ಚೀಲದಲ್ಲಿ ಹಾಕಿ ದಾರದಿಂದ ಹೊಲೆದು ಅರಗಿನಿಂದ ಇಲಾಖಾ ಮೊಹರು 310 ರ ಮೊಹರು ಮಾಡಲಾಯಿತು. ನಂತರ ಆರು ೋಪಿಗೆ ನೋಟೀಸನ್ನು ಜಾರಿ ಮಾಡಿದೆವು. ಈ

ಬಗ್ಗೆ ಸ್ಥಳದಲ್ಲಿ ರಾತ್ರಿ 9.30 ರಿಂದ 11.00 ಗಂಟೆಯ ವರೆಗೆ ವಾಹನದ ಬೆಳಕು ಮೊಬೈಲ್ ಟಾರ್ಚ್ ಬೆಳಕಿನ ಸಹಾಯದಿಂದ ಮಹಜರು ಕ್ರಮ ಜರುಗಿಸಲಾಯಿತು. ಸದರಿ ಮಹಜರನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-1 (ಇ) ಎಂದು ಗುರುತಿಸಲಾಯಿತು. ಈ ಬಗ್ಗೆ ತನಿಖಾಧಿಕಾರಿಯ ಮುಂದೆ 08.06.2023 ರಂದು ಹೇಳಿಕೆ ನೀಡಿದ್ದೇನೆ. ಆರೋಪಿಯನ್ನು , ಮುದ್ದೆಮಾಲನ್ನು, ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಹಾಗೂ ಮು ಮಾ-1 ನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ನಿಪಿ-11 ರ ಭಾವಚಿತ್ರಗಳಲ್ಲಿ ವಾಹನವನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಬಿ ಆರ್ ಎಲ್ ವಕೀಲರಿಂದಃ**

ದಿನಾಂಕಃ 08.06.2023 ರಂದು ಬೆಳಿಗ್ಗೆ 10.00 ಗಂಟೆಗೆ ಕರ್ತವ್ಯಕ್ಕೆ ಹಾಜರಾಗಿದ್ದೇನೆ. ನಾನು ಹಾಜರಾತಿ ಪುಸ್ತಕದಲ್ಲಿ ಸಹಿ ಹಾಕಿದ್ದೇನೆ. ಆ ದಿನ ನಾವು ಕಛೇರಿಯಿಂದ ರಾತ್ರಿ 9.00 ಗಂಟೆಗೆ ಗಸ್ತು ಹೊರಟೆವು. ರಾತ್ರಿ 9.00 ರಿಂದ 9.20 ರವರೆಗೆ ಹುಣಸೂರು ಮುಖ್ಯ ರಸ್ತೆಯಲ್ಲಿ ಗಸ್ತು ಮಾಡಿಕೊಂಡು ಘಟನಾ ಸ್ಥಳಕ್ಕೆ ಹೋಗಿದ್ದೇವೆ. ಆ ದಿನ ಇಲಾಖಾ ವಾಹನವನ್ನು ನಾನೇ ಚಲಾಯಿಸುತ್ತಿದ್ದೆ. ಆ ದಿನ ಚಾಸಾ-3 ರವರು ಸದರಿ ವಾಹನವನ್ನು ಕೈ ಅಡ್ಡ ಹಿಡಿದು ತಡೆದರು. ಈ ಬಗ್ಗೆ ಹೇಳಿಕೆಯಲ್ಲಿ ಹೇಳಿಲ್ಲ. ಆ ಸಮಯದಲ್ಲಿ ಸದರಿ ಮೋಟಾರು ಸೈಕಲ್ ಯಾರ ಹೆಸರಿನಲ್ಲಿದೆ ಎಂದು ನಾನಾಗಲೀ ನನ್ನ ಮೇಲಾಧಿಕಾರಿಗಳಾಗಲೀ ತಿಳಿದುಕೊಳ್ಳಲು ಪ್ರಯತ್ನಿಸಿಲ್ಲ. ಆ ದಿನ ನನ್ನ ಸಮಕ್ಷಮ ಮಹಜರು ಮಾಡಿದ್ದಾರೆ. ಮಹಜರು ಸಮಯದಲ್ಲಿ ಪಂಚರು ಇದ್ದರು. ಪಂಚರಿಗೆ ನೋಟೀಸು ಕೊಟ್ಟಿದ್ದೇವೆ. ಸಾಮಾನ್ಯವಾಗಿ ಮೇಲಾಧಿಕಾರಿಗಳು ಹೇಳಿದ ಕೆಲಸವನ್ನು ಚಾಚು ತಪ್ಪದೇ ನಿರ್ವಹಿಸುತ್ತೇವೆ. ಆರೋಪಿ ಮದ್ಯವನ್ನು ತನ್ನ ವಾಹನದಲ್ಲಿ ಸಾಗಾಣಿಕೆ ಮಾಡದೇ ಇದ್ದರೂ ಸಹ ಮೇಲಾಧಿಕಾರಿಗಳ ಮಾತು ಕೇಳಿ ಇಲಾಖೆಯ ಅಂಕಿ ಅಂಶಕೋಸ್ಕರ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳ

ಮಹಜರನ್ನು ಚಾಸಾ-3 ರವರು ಬರೆದರು. ಸ್ಥಳದ ಚೆಕ್ಕು ಬಂದಿ ಹೇಳುತ್ತೇನೆ. ಪೂರ್ವ ಪಶ್ಚಿಮ ಖಾಸಗಿಯವರ ಜಮೀನು, ಉತ್ತರಕ್ಕೆ ಕೆ ಆರ್ ನಗರಕ್ಕೆ ಹೋಗುವ ರಸ್ತೆ , ದಕ್ಷಿಣಕ್ಕೆ ಹುಣಸೂರು ಟೌನ್ ಗೆ ಬರುವ ರಸ್ತೆ. ದಕ್ಷಿಣಕ್ಕೆ ಕಲ್ಲುಣಿಕೆಗೆ ಹೋಗುವ ರಸ್ತೆ ಇದೆ ಎಂದರೆ ಸರಿ. ಸದರಿ ರಸ್ತೆಯನ್ನು ಮಹಜರಿನಲ್ಲಿ ನಮೂದಿಸಿದೀರಾ ಎಂದರೆ ನಾವು ಮುಖ್ಯ ರಸ್ತೆಯಲ್ಲಿ ಗಸ್ತು ಮಾಡುತ್ತಿದ್ದೆವು. ಆ ದಿನ ನಾನು ಸ್ಥಳದಲ್ಲಿ ಇರಲಿಲ್ಲ ಹಾಗೂ ನನ್ನ ಸಮಕ್ಷಮ ಯಾವುದೇ ಮಹಜರು ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡಬೇಕೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.